# ಐತಿಹಾಸಿಕ, ಅಭೂತಪೂರ್ವ 'ಬಳ್ಳಾರಿ ಚಲೋ' ಜನಾಂದೋಲನ ಪಾದಯಾತ್ರೆಯನ್ನು ಯಶಸ್ವಿಗೊಳಿಸಿದ ಪ್ರತಿಯೊಬ್ಬರಿಗೂ ತಲೆಬಾಗಿ, ನನ್ನ ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ!

ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳು, ಭ್ರಷ್ಟಾಚಾರ ಹಾಗೂ ಲೂಟಿಕೋರತನವನ್ನು ಖಂಡಿಸಿ, ರಾಜ್ಯದ ಶೋಷಿತರು, ದಲಿತರು, ಬಡವರು, ರೈತರ ಪರವಾಗಿ, ಸಮಸ್ತ ಜನತೆಯ ಪರವಾಗಿ ಪ್ರತಿಭಟಿಸಲು, ಪಕ್ಷದ ವತಿಯಿಂದ ಆಯೋಜಿಸಲಾಗಿದ್ದ 10 ದಿನಗಳ 'ಬಳ್ಳಾರಿ ಚಲೋ' ಪಾದಯಾತ್ರೆಯು, 2026ರ ಸೆಪ್ಟೆಂಬರ್ 1ರಂದು ಲಿಂಗಸಗೂರಿನ ಪವಿತ್ರ ಭೂಮಿಯಿಂದ ಆರಂಭಗೊಂಡು ಸಂತೇಕಲ್ಲೂರು, ಮಸ್ಕಿ , ಗುಡದೂರು, ಸಿಂಧನೂರು, ಕಾರಟಗಿ, ಸಿದ್ಧಾಪುರ, ಜಂಗಮರ ಕಲ್ಗುಡಿ, ಗಂಗಾವತಿ, ಕಂಪ್ಲಿ , ಮೆಟ್ರಿ, ಹಳೇದರೋಜಿ, ಕುಡಿತಿನಿ ಹಾಗೂ ಸಂಡೂರು ಮಾರ್ಗವಾಗಿ ಬಳ್ಳಾರಿಯವರೆಗೆ ನಡೆದು ಬಂದ ಪಾದಯಾತ್ರೆ ಜನಾಕ್ರೋಶದ ಜನಾಂದೋಲನವಾಗಿ ಪರಿವರ್ತನೆಗೊಂಡು ನಿನ್ನೆ, ಅಂದರೆ ಸೆಪ್ಟೆಂಬರ್ 10ರಂದು, ಬೃಹತ್ ಸಮಾರೋಪದೊಂದಿಗೆ ಅತ್ಯಂತ ಯಶಸ್ವಿಯಾಗಿ ಪೂರ್ಣಗೊಂಡಿದೆ.

ಅಂತಿಮ ಘಟ್ಟದಲ್ಲಿ ಬಳ್ಳಾರಿಯ ಪುಣ್ಯಭೂಮಿಗೆ ನನ್ನ ಹಣೆಯನ್ನು ಸ್ಪರ್ಶಿಸಿದಾಗ, ಅಲ್ಲಿನ ಪವಿತ್ರ ಮಣ್ಣು ಸಾರ್ಥಕತೆಯ ಭಾವ ಮೂಡಿಸಿ, ವಿಜಯ ತಿಲಕದಂತೆ ರೋಮಾಂಚನಗೊಳಿಸಿದ ಆ ಕ್ಷಣ ನಾನು ಎಂದೂ ಮರೆಯಲಾಗದು!

ಭ್ರಷ್ಟ ಕಾಂಗ್ರೆಸ್ ಸರ್ಕಾರದ ನೂರಾರು ಕೋಟಿ ರೂಪಾಯಿಗಳ ವಾಲ್ಮೀಕಿ ನಿಗಮದ ಲೂಟಿ, SCP-TSP ಹಣದ ದುರ್ಬಳಕೆ ಹಾಗೂ ಅಭಿವೃದ್ಧಿ ಶೂನ್ಯ ಆಡಳಿತದ ವಿರುದ್ಧ, ಜನಾಕ್ರೋಶವನ್ನು ಪ್ರತಿನಿಧಿಸಿದ ನಮ್ಮ ನಡಿಗೆ, ರಾಜ್ಯದ ಸಮಸ್ಯೆಗಳನ್ನು ಪ್ರತಿನಿಧಿಸಿದ ಸಂಕೇತವಾಯಿತು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಸೃಷ್ಟಿಸಿರುವ ಸಮಸ್ಯೆಗಳ ವಿರುದ್ಧದ ದನಿಯಾಯಿತು.





ಈ 10 ದಿನಗಳ ಪಾದಯಾತ್ರೆಯಲ್ಲಿ, ಅತ್ಯಂತ ಅಭಿಮಾನದಿಂದ, ನಮ್ಮನ್ನು ಬೆಂಬಲಿಸಿ ಆಶೀರ್ವದಿಸಲು, ನಮ್ಮ ಜೊತೆ ಹೆಜ್ಜೆಹಾಕಿದ ಪ್ರತಿಯೊಂದು ಗ್ರಾಮದ, ಪ್ರತಿಯೊಂದು ಊರಿನ ಸಾರ್ವಜನಿಕರ ಪ್ರೀತಿಯ ಋಣ ಎಂದು ತೀರಿಸಲಾಗದು. ಪ್ರತಿಭಟನೆಯ ನಡುವೆಯೂ ಜನ ತೋರಿದ ಅಕ್ಕರೆ, ಸಡಗರ ಪೂರಿತ ಪ್ರೀತಿ ಆದರಗಳು ನಮ್ಮ ಹೋರಾಟಕ್ಕೆ ನೀಡಿದ ಪ್ರೇರಣೆಯ ಶಕ್ತಿಯಾಯಿತು. ಹಿರಿಯರ ಆಶೀರ್ವಾದ, ಬುತ್ತಿ ನೀಡಿದ ತಾಯಂದಿರ ಮಮತೆಯ ಹಾರೈಕೆ, ಯುವಜನರ ರಣೋತ್ಸಾಹದ ಬೆಂಬಲ, ಜನಮಾನಸದಲ್ಲಿ ಮೂಡಿರುವ ನಿರೀಕ್ಷೆಗಳನ್ನು ಸಂಕೇತಿಸಿತು. ಪಾದಯಾತ್ರೆಯ ಹಾದಿಯಲ್ಲಿ, ಅಡಿಯಿಟ್ಟ ಪ್ರತಿ ಹೆಜ್ಜೆಯಲ್ಲಿ ಆತ್ಮವಿಶ್ವಾಸದ ಹೆಗ್ಗುರುತು ಅಚ್ಚೊತ್ತಿತು. ಹೋರಾಟದ ಛಲಕ್ಕೆ ಸ್ಫೂರ್ತಿಯಾಯಿತು. ಪ್ರತಿಯೊಂದು ಘಟ್ಟಗಳು ಹೋರಾಟದ ಮಾರ್ಗದಲ್ಲಿ ಮೈಲುಗಲ್ಲುಗಳಾಗಿ ಪಡಿಮೂಡಿದವು.

ಪಾದಯಾತ್ರೆಯ ಹಾದಿಯಲ್ಲಿ ಜನರು ಹೇಳಿಕೊಂಡ ಕುಂದು-ಕೊರತೆಗಳು, ಕಷ್ಟ-ಸಂಕಷ್ಟಗಳು ಕಾಂಗ್ರೆಸ್ ಸರ್ಕಾರದ ದಮನಕಾರಿ ಧೋರಣೆಗೆ ಕನ್ನಡಿ ಹಿಡಿಯಿತು. ರೈತರು, ಶ್ರಮಿಕರು, ತಾಯಂದಿರು ಹಾಗೂ ವರ್ತಕರು, ಶಿಕ್ಷಕರು, ಅಲೆಮಾರಿ ಸಮುದಾಯಗಳು, ಕುರಿಗಾಹಿ ಬಂಧುಗಳೊಂದಿಗಿನ ಸಂವಾದಗಳು, 'GEN Z Connect' ಮೂಲಕ ನವ ಆಲೋಚನೆಗಳನ್ನು ಹಂಚಿಕೊಂಡ ಯುವಶಕ್ತಿಯ ಭಾವನೆಗಳು ಪಾದಯಾತ್ರೆಯ ಉದ್ದೇಶದ ಸಾರ್ಥಕತೆಯನ್ನು ಪ್ರತಿಬಿಂಬಿಸಿತು.







ಈ ಐತಿಹಾಸಿಕ ಜನಾಂದೋಲನ ಪಾದಯಾತ್ರೆಯಲ್ಲಿ ಭಾಗವಹಿಸಿ, ಪ್ರತಿ ಹೆಜ್ಜೆಯಲ್ಲೂ ತಮ್ಮ ಮಾರ್ಗದರ್ಶನ ಹಾಗೂ ಪೂರ್ಣ ಆಶೀರ್ವಾದದೊಂದಿಗೆ ನಮ್ಮ ಹೋರಾಟಕ್ಕೆ ಭೀಮಬಲ ತುಂಬಿದ ಪಕ್ಷದ ಎಲ್ಲ ಹಿರಿಯ ನಾಯಕರು, ಸಂಸದರು ಹಾಗೂ ಮಾಜಿ ಸಂಸದರು, ಶಾಸಕರು ಹಾಗೂ ಮಾಜಿ ಶಾಸಕರಿಗೆ ನನ್ನ ಹೃದಯಪೂರ್ವಕ ಪ್ರಣಾಮಗಳು. ಬಿಸಿಲು, ಧೂಳನ್ನೂ ಲೆಕ್ಕಿಸದೆ ಪಾದಯಾತ್ರೆಯ ಸಂಪೂರ್ಣ ಆಯೋಜನೆಯನ್ನು ಹೆಗಲ ಮೇಲೆ ಹೊತ್ತು ಯಶಸ್ವಿಗೊಳಿಸಿದ ರಾಯಚೂರು, ಕೊಪ್ಪಳ, ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಗಳ ಪಕ್ಷದ ಜಿಲ್ಲಾಧ್ಯಕ್ಷರು, ಮಂಡಲ ಅಧ್ಯಕ್ಷರು, ವಿವಿಧ ಮೋರ್ಚಾಗಳ ಅಧ್ಯಕ್ಷರು, ಜನಪ್ರತಿನಿಧಿಗಳು, ಹಿರಿಯ ನಾಯಕರು ಹಾಗೂ ಪ್ರತಿಯೊಬ್ಬ ನಿಷ್ಠಾವಂತ ಕಾರ್ಯಕರ್ತ ಬಂಧುಗಳಿಗೆ ನನ್ನ ಕೃತಜ್ಞತಾಪೂರ್ವಕ ವಂದನೆಗಳು. ಸಮರ್ಪಣಾ ಮನೋಭಾವದಿಂದ ಸೇನಾನಿಗಳಂತೆ ಪಾದಯಾತ್ರೆಯ ಯಶಸ್ಸಿಗೆ ತಮ್ಮನ್ನು ತೊಡಗಿಸಿಕೊಂಡ ಪ್ರಬಂಧಕರ ಕೊಡುಗೆ ಅನನ್ಯವಾದುದು. ಪಾದಯಾತ್ರಿಕರಿಗೆ ಅತ್ಯಂತ ಸುವ್ಯವಸ್ಥಿತವಾಗಿ ವಸತಿ ಹಾಗೂ ಊಟೋಪಚಾರದ ವ್ಯವಸ್ಥೆ ಕಲ್ಪಿಸಿದ ತಂಡ, ಮಾರ್ಗದುದ್ದಕ್ಕೂ ಆರೋಗ್ಯದ ಮೇಲ್ವಿಚಾರಣೆ ನಡೆಸಿದ ವೈದ್ಯಕೀಯ ತಂಡ ಹಾಗೂ ವೇದಿಕೆ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಯಶಸ್ವಿಗೊಳಿಸಿದ ತಂಡಗಳ ಪರಿಶ್ರಮ ಮತ್ತು ಬದ್ಧತೆ ನಿಜಕ್ಕೂ ಶ್ಲಾಘನೀಯ. ಮೆರವಣಿಗೆ ಸಾಗಿದ ಹಾದಿಯಲ್ಲಿ ಸಾರ್ವಜನಿಕ ಸಂಚಾರಕ್ಕೆ ಅನಾನುಕೂಲವಾಗದಂತೆ ಸಹಕರಿಸಿದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೂ ನನ್ನ ಕೃತಜ್ಞತೆಗಳು. ಈ 10 ದಿನಗಳ ಕಾಲ ನಮ್ಮೊಂದಿಗೆ ನಡೆದು, ಬಿಸಿಲಲ್ಲೂ ಹೆಜ್ಜೆಹಾಕಿ, ಹಳ್ಳಿಯ ಜನರ ನೋವು ಹಾಗೂ ನಮ್ಮ ಜನಾಂದೋಲನದ ಸಂದೇಶವನ್ನು ರಾಜ್ಯದ ಮೂಲೆ ಮೂಲೆಗೂ ತಲುಪಿಸಿದ ಎಲ್ಲಾ ಪತ್ರಿಕಾ ಮತ್ತು ವಿದ್ಯುನ್ಮಾನ ಮಾಧ್ಯಮ ಮಿತ್ರರಿಗೆ ನಾನೆಂದಿಗೂ ಆಭಾರಿ. ಹಾಗೆಯೇ ಪಕ್ಷದ ಸಾಮಾಜಿಕ ಜಾಲತಾಣಗಳಲ್ಲಿ ಕಾರ್ಯಕರ್ತರು ಹಾಗೂ ಅಭಿಮಾನಿಗಳು ತೊಡಗಿಸಿಕೊಂಡ ರೀತಿ ಎಂದೆಂದಿಗೂ ಸ್ಮರಣೀಯ. ಒಟ್ಟಾರೆಯಾಗಿ ಈ ಪಾದಯಾತ್ರೆಯ ಯಶಸ್ಸಿಗಾಗಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ತಮ್ಮನ್ನು ಸಮರ್ಪಿಸಿಕೊಂಡ ಪ್ರತಿಯೊಬ್ಬರಿಗೂ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ!



ಈ ಪಾದಯಾತ್ರೆ ನಮ್ಮ ಜವಾಬ್ದಾರಿಯನ್ನು ಹೆಚ್ಚಿಸಿದೆ. ಜನರ ಆಶೋತ್ತರಗಳಿಗೆ ಸ್ಪಂದಿಸಿ ಅವರ ದುಃಖ-ದುಮ್ಮಾನಗಳಿಗೆ ಧ್ವನಿಯಾದರೆ ಜನ ನಮ್ಮೊಂದಿಗೆ ಗಟ್ಟಿಯಾಗಿ ನಿಲ್ಲುತ್ತಾರೆ ಎಂಬ ಸತ್ಯವನ್ನು ಅಭಿವ್ಯಕ್ತಗೊಳಿಸಿದೆ. ಈ ನಿಟ್ಟಿನಲ್ಲಿ, ಸಮಗ್ರ ಕರ್ನಾಟಕದ ಜನರ ನಿರೀಕ್ಷೆಗಳನ್ನು ಪ್ರತಿನಿಧಿಸಿ ನಮ್ಮ ಹೋರಾಟ ಮುಂದುವರಿಯಲಿದೆ. ವಿಶೇಷವಾಗಿ ನಮ್ಮ ಕಲ್ಯಾಣ ಕರ್ನಾಟಕ ಎದುರಿಸುತ್ತಿರುವ ತಾರತಮ್ಯ ನೀತಿಯ ವಿರುದ್ಧ ಹಾಗೂ ಅಭಿವೃದ್ಧಿಗಾಗಿ ನಮ್ಮ ವಿಶೇಷ ಕಾಳಜಿ, ಕಳಕಳಿ ನಿರಂತರವಾಗಿ ಸಾಗಲಿದೆ.  ಈ ಭಾಗದ ಜನರ ಪ್ರೀತಿ-ಆದರಗಳೇ ನಮ್ಮ ಬೆನ್ನಿಗಿರುವ ಮಹಾಶಕ್ತಿಯಾಗಿದೆ.

ಬಂಧುಗಳೇ, 'ಬಳ್ಳಾರಿ ಚಲೋ' ಜನಾಂದೋಲನ ಪಾದಯಾತ್ರೆ ನಮ್ಮ ಮುಂದಿನ ಹೋರಾಟಗಳಿಗೆ ಹನುಮ ಪ್ರೇರಣೆ ನೀಡಿದೆ. ಸಂಘಟನೆಯೇ ಶಕ್ತಿ, ಜನಧ್ವನಿಯೇ ನಮಗೆ ಆದೇಶ, ಜನರ ನಿರೀಕ್ಷೆಯೇ ನಮ್ಮ ಗುರಿ. ಈ ನಿಟ್ಟಿನಲ್ಲಿ ವಿರಮಿಸುವ ಪ್ರಶ್ನೆಯೇ ಇಲ್ಲ!

ಇಂತಿ ನಿಮ್ಮ

**ಬಿ.ವೈ.ವಿಜಯೇಂದ್ರ**
**ರಾಜ್ಯಾಧ್ಯಕ್ಷ, ಬಿಜೆಪಿ - ಕರ್ನಾಟಕ**




